ಹೊಸದಾದ ವಾಸುದೇವಪ್ಪನೋರ ಮನೆಯೊಳಗೆ ಗದ್ದಿಗೆ ಮಾಡಿ ಸಾಲುಕೆ ಮನೆಯೊರಗೆ ನಿಂತಿದ್ದರು. ದೇವರು ಬಂದು ಗದ್ದುಗೆ ಆಗಿರುವ ವಿಚಾರ ವಾಸುದೇವಪ್ಪನೋರಿಗೆ ಮುಟ್ಟಿ, ದೇವರು ಹಿಂದುಲ ರೋಡಲ್ಲಿ ಎಂಗ್ ಬಂತು ಅಂತಾವ ತಿಳೀದಂಗಾಗಿ ಎಂಗಾದ್ರು ಬರ್ಲಿ ಶಾಸ್ತ್ರಿಗಳೇ ಕರೆಕ್ಟ್ ಟೈಮಿಂಗಿಗೆ ಗದ್ದುಗೆ ಆಯ್ತು ನೋಡ್ರೀ. ಎಂದು ಬಡಾಯಿ ಕೊಚ್ಚಿಕೊಂಡು ತಮ್ಮ ಅರಬ್ಬುಡಗೆ ಗಂಡು ಪರಿವಾರದೊಂದಿಗೆ ಮನೆಯತ್ತ ಧಾವಿಸಿದರು.

ದೇವರನ್ನ ತಕ್ಕಂಡು ಒಳೀಕೆ ನುಗ್ಗಿದ ಮಾದಿಗರ ಹುಡುಗರನ್ನು ನೋಡುತ್ತಿದ್ದ ಅಡುಗೆಯವನೊಬ್ಬನು ಎಲ್ಲೋ ನೋಡಿದೀನಲ್ಲ ಅಂದ್ಕೋಳ್ತಾ ತಟಕ್ಕನೆ ದೂರದ ನೆಂಟನೊಬ್ಬನ ಗುರುತು ಹಿಡಿದ. ಆದರೆ, ಬಾಯಿ ಬಿಟ್ಟು ಮಾತನಾಡುವಂತಿಲ್ಲ. ಆತನೀಗ ಅಡುಗೆ ಭಟ್ಟರ ಕೆಲಸದ ಮೇಲೆ ಎರಡು ರೂಪಾಯಿಯ ಜನಿವಾರವ ಹಾಕೆಂಡು ನೆಟ್ಟುಗೆ ಬಂದಿದ್ದ. ಇವನಂತೆಯೇ ಇನ್ನೂ ಅನೇಕರು ಜನಿವಾರ ತಕ್ಕೊಂಡು ಯಾವ ಜಾತಿಯ ಜನದ ಅಡುಗೆ ಕಾರ್ಯಕ್ರಮಕ್ಕಾದರೂ ಹೋಗಿ ಕಾಸು ಮಾಡಿಕೊಳ್ತಾ ಇದ್ರೂ.



ವಂಶಪಾರಂಪರ್ಯವಾಗಿ ತಮ್ಮ ಮನೆ ಬಾಗಿಲಲ್ಲಿ ನಿಂತಿದ್ದ ಎಲ್ಲಾ ಜನಗೋಳೆಲ್ಲಾ ಗೃಹಪ್ರವೇಶದ ದಿನ ಇಂಗೆ ಸಾಲಾಗೆ ನಿಂತಿರೋದು ನೋಡಿ ವಾಸುದೇವಪ್ಪನೋರಿಗೆ ಎದೆ ಕುಸಿದು ಹೋದಂಗಾತು. ಅವರೆಲ್ಲರ ಹಾಳು ಮಕವನ್ನ ನೋಡ್ಕಂಡು ಗಾಬರೀಲಿ ಒಳೀಕೋಗಿ ನೋಡ್ತಾರೆ ಹರಿಗೆಗಳ ಸಮೇತ ಮಾದಿಗರ ಎಂಕುಟೇಶನ ತಂದು ನಡೂ ಮನೇಲಿ ಕೂರಿಸಿ ಬಿಟ್ಟವರೆ.

ಆ ಕ್ಷಣಕ್ಕೆ ಓಡಿ ಬಂದ ಹೊಸ ಸೊಸೆ ಏನೇನೋ ಒದರುತ್ತಿರುವಾಗ ಊರಿನ ತುಂಬ ಹೆಸರಾದ ಹೆಣ್ಣು ಕರುಳಿನವನೆಂದೂ, ಲೋಕದ ತುಂಬ ಸ್ತ್ರೀವಾದಿ ಚಿಂತಕರೆಂದೂ ಪ್ರಸಿದ್ಧರಾಗಿದ್ದ ವಾಸುದೇವಪ್ಪನೋರ ಮಗರು ತನ್ನೆಂಡ್ರು ಕೆನ್ನೆಗೆ ಎತ್ತಿ ಒಂದೇಟು ಬಿಟ್ರು. ಅವಳಿಗೆ ಹಿಂದಿನ ಜನ್ಮದ ನೆನಪುಗಳೆಲ್ಲಾ ತಿರುಗಿಕೊಂಡು ಬಂದ್ವು. ಅವಳು ನಿಂತಲ್ಲೇ ಒಂದು ರವುಂಡು ಹೊಡೆದು ಸೀದಾ ಹೋಗಿ ಅಲ್ಲೇ ಗದ್ದುಗೆ ಆಗಿದ್ದ ಮಾದಿಗರ ಎಂಕುಟೇಸ ಸ್ವಾಮಿಯ ಮಡಿಲಿಗೆ ಹೋಗಿ ಬಿದ್ದಳು. ಮಗನ ಪ್ರತಾಪವನ್ನು ಕಂಡು 'ಅವಳಿಗೆ ಗೊತ್ತಾಗೋಲ್ಲ ಅಂದ್ರೆ ನಿಂಗೂ ಗೊತ್ತಾಗೋಲ್ವೇನೆ' ಎನ್ನುತ್ತಾ ಅಮ್ಮನೋರ ಕೆನ್ನೆಗೂ ಒಂದು ಬಿಡಲಾಗಿ ಅವರೂ ಯಥಾ ಪ್ರಕಾರ ರವಂಡು ಸುತ್ತಿ ದೇವರ ಮಡಿಲಿಗೆ ಬಿದ್ದಾಗ ಸುತ್ತುಲ ಜನುವೆಲ್ಲಾ ಅಪ್ಪ-ಮಕ್ಕಳು ಸಮಬಲ ಪಕಾಕ್ರಮಿಗಳು ಎಂದು ಒಪ್ಪಿಕೊಂಡರು.

ಒಳಗೇನು ನಡೀತಿದೆ ಎಂದು ಮಾದಿಗರ ಹಿರೇತಲೆಗುಳೆಲ್ಲಾ ಓತಿಕ್ಯಾತನ ತರ ಕಾಣದಿದ್ದರೂ ಕುತ್ತಿಗೆ ಚಾಚಿ ಕಾಯ್ಕಂಡು ನಿಂತಿದ್ವು. ಒಳಗಿಂದ ಅರಿಗೆಗಳು ಉಲ್ಡುಕಂಡು ಬರೂವಾಗ ಇದೇನು ಇಂಗ್ಬತ್ತಾವೆ ಅಂತ ನೋಡುತ್ತಿದ್ದ ಮಾದಿಗರ ಹಿರಿ-ಕಿರಿ ತಲೆಗುಳೆಲ್ಲಾ ವಾಸುದೇವಪ್ಪನೋರು ನಮ್ಮ ದೇವರುಗಳನ್ನ ಕೊಯ್... ಕೊಯ್ ಅಂತವಾ ಆಚೆಕ್ ಎಸೀತಾವ್ರೆ ಅಂತ ಗೊತ್ತಾಗೋವತ್ತಿಗೆ ಕಾಂಕ್ರಿಟ್ ರೋಡಿನ ಮೇಲೆ ಉಲ್ಡಕಂಡೋದ ಅರಿಗೆಗಳು ಹೊಸ ಮಂತ್ರಿ ತನ್ನ ಅನುದಾನದಲ್ಲಿ ಮಾಡಿಸಿದ್ದ ಬಾಕ್ಸ್ ಚರಂಡಿಲ್ಲಿ ಬಿದ್ದು ತೇಲ್ಗಣ್ಣು-ಮೇಲ್ಗಣ್ಣು ಬಿಟ್ಟವು. ಅದೇ ಗಳೀಗೇಲಿ ಮಾದಿಗರ ಎಂಕುಟೇಸನ ಮೆರೆಮೂರ್ತಿಯನ್ನೂ ಒಳಗಿಂದಲೇ ನಾಲ್ಕು ಜನ ಹಿಡಿದು ಮೂರು ಬಾರಿ ತೂಗಿ ಒಮ್ಮೆಗೆ ಆಚೀಕೆ ಕೈ ತೂಗಿ ಬಿಟ್ಟಾಗ ಮೆರೆಮೂರ್ತಿ ಬೀದೀಲಿ ಇಟ್ಟಾಡಿ ಹೋಯ್ತು. ಹರಿಜನಕ್ಕೆ ತಮ್ಮ ದೇವರನ್ನು ಆಯ್ಕಣಕೂ ಕೈ-ಬಾಯಿ ಬರಲಿಲ್ಲ.

* * *

ಇತ್ತ ಕಡೆಯಿಂದ ಮತ್ತೆ ಮಂಗಳವಾದ್ಯದ ಸದ್ದು. ಜಿಲ್ಲೆಯ ಮೈನ್ ಬ್ರಾಂಚಿನ ದೇವರ, ಮತ್ತೊಂದು ಕಡೆಯಿಂದ ಭಾರೀ ಜೈ-ಕಾರಗಳೊಂದಿಗೆ ವಾಸುದೇವಪ್ಪನೋರ ಮನೆಯ ಗೃಹ ಪ್ರವೇಶದ ಚೀಫ್ ಗೆಸ್ಟ್ ಮತ್ತು ಮಾದಿಗರ ಎಂಕುಟೇಸನ ಪರಮ ಭಕ್ತರೂ ಆಗಿದ್ದ ಹೊಸ ಮಂತ್ರಿಯ ಆಗಮನ.

●